ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-1, July-August 2025, Pp. 53-60
©*IIMRD*, Mysuru

IIMRD JOURNALS

www.iimrd.com

# ಚಿಕ್ಕದೇವರಾಜ ಒಡೆಯರ್ ಅವರ ಕಾಲದ ವಿಶಿಷ್ಟ "ದೇ" ಮುದ್ರೆ ಮತ್ತು ಚಕ್ರರು

**ಪ್ರೊ.ಶಲ್ವಪಿಳ್ಳೈ ಅಯ್ಯಂಗಾರ್**

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲೂಕಿನಲ್ಲಿ ಸರಗೂರು ಹೋಬಳಿಯ ವ್ಯಾಪ್ತಿಯಲ್ಲಿ ಮೊಳೆಯೂರು ಎಂಬ ಒಂದು ಸಣ್ಣ ಗ್ರಾಮವಿದೆ. ಆ ಗ್ರಾಮದಲ್ಲಿ ಬಡತನದಿಂದ ಕೂಡಿರುವ ಸಣ್ಣಪುಟ್ಟ ಕೂಲಿನಾಲಿ ಮಾಡಿ ಜೀವನ ಸಾಗಿಸುತ್ತಿರುವ ಶ್ರೀ ಚಕ್ರಸತೀಶ್ ಎಂಬ ವ್ಯಕ್ತಿಯ ಬಳಿಯಲ್ಲಿ ಮರದಿಂದ ಮಾಡಿದ "ದೇ" ಎಂಬ ಅಕ್ಷರದ ಮುದ್ರೆಯ ಕೋಲು ಇದ್ದು, ಇದು ವಿಶಿಷ್ಟವಾದ ಇತಿಹಾಸಕ್ಕೆ ಸಾಕ್ಷಿಯಾಗಿದೆ. ಈ ಮುದ್ರೆಯ ಬಗ್ಗೆ ಚಿಕ್ಕದೇವರಾಜ ಒಡೆಯರ್ (ಸಾ.ಶ. 1673 – 1704) ಅವರ ಇತಿಹಾಸದ ಬಗ್ಗೆ ಸಾ.ಶ. 1883 ರಲ್ಲಿ ಪ್ರಕಟವಾದ ಉಲ್ಲೇಖಿತವಾದ ಅಂಶಗಳಿಗೆ ತಾಳೆಯಾಗುತ್ತಿದ್ದು, ಇದು ಚಿಕ್ಕದೇವರಾಜ ಒಡೆಯರ್ ಅವರ ಕಾಲದಲ್ಲಿ ಇದ್ದ ಒಂದು ಕಂದಾಯದ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಸುಮಾರು 320 ವರ್ಷಗಳ ಹಿಂದೆ ಚಾಲ್ತಿಯಲ್ಲಿದ್ದ ಈ ಮುದ್ರೆಗಳ ಬಗ್ಗೆ ಮಹೀಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರದಲ್ಲಿ ಸುಮಾರು 125 ವರ್ಷಗಳ ಹಿಂದೆ ಮತ್ತು 100 ವರ್ಷದ ಹಿಂದಿನ ಶ್ರೀಮನ್ಮಹಾರಾಜರವರ ವಂಶಾವಳಿ ಗ್ರಂಥಗಳಲ್ಲಿ ಉಲ್ಲೇಖಿಸಿದ್ದು ಅದಕ್ಕೆ ಪೂರಕವಾಗಿ ಈ ಮರದ ಮುದ್ರೆಯಿದ್ದು ಇತಿಹಾಸದ ಹೊಸಪುಟವನ್ನು ತೆರೆಯುತ್ತದೆ. ಈಗಲೂ ಈ ವಂಶದವರು ಇದ್ದು ಅವರು ಕೆಲವು ವಿಶಿಷ್ಟ ಕೆಲಸಗಳನ್ನು ಇಂದಿಗೂ ನೆರವೇರಿಸುತ್ತಿದ್ದಾರೆ. ಈ ಮುದ್ರೆಯನ್ನು ಸದ್ಯಕ್ಕೆ ಚಕ್ರವಂಶದವರು ಎಂದು ಕರೆದುಕೊಳ್ಳುವವರು ತಮ್ಮ ವಂಶದ ಪರಂಪರೆಯಲ್ಲಿ ರಕ್ಷಿಸಿದ್ದು ಅದರ ಬಗ್ಗೆ ಈ ಲೇಖನ ಗಮನಸೆಳೆಯುತ್ತದೆ.*

**ಮುಖ್ಯಪದಗಳು (Keywords):** "ದೇ" ಮುದ್ರೆ, ಚಕ್ರರು, ಸಾರಿಕೆ, ಚಕ್ರತನ, ಚಿಕ್ಕದೇವರಾಜ ಒಡೆಯರ್, ಕಂದಾಯ, ಮೊಹರು, ಮುದ್ರೆಯ ಉಂಗುರ, ಹೆಗ್ಗಡದೇವನ ಕೋಟೆ, ಮೊಳೆಯೂರು, ಕಾಳಿಹುಂಡಿ

## ಪೀಠಿಕೆ

ಮೈಸೂರು ಮಹಾರಾಜರ ಪೂರ್ವ ಇತಿಹಾಸದಲ್ಲಿ ಅನೇಕ ಆಶ್ಚರ್ಯಕರ ಅಂಶಗಳು ಇದ್ದು, ಆಧುನಿಕ ಕಾಲದ ಮೈಸೂರಿನ ಇತಿಹಾಸವು ಮಾತ್ರ ಹೆಚ್ಚು ದಾಖಲಾಗಿದೆ. ಮೈಸೂರಿನ ಆಧುನಿಕ ಇತಿಹಾಸ ಎಂದರೆ ಅದು ಸಾ.ಶ. 1799 ರ ನಂತರದ ಇತಿಹಾಸ. ಅದಕ್ಕಿಂತ ಮುಂಚಿನ ಇತಿಹಾಸದ ಬಗ್ಗೆ ಬೆಳಕು ಚೆಲ್ಲಬೇಕಾದ

*Please cite this article as:* ಶಲ್ವಪಿಳ್ಳೈ ಅಯ್ಯಂಗಾರ್. (2025). ಚಿಕ್ಕದೇವರಾಜ ಒಡೆಯರ್ ಅವರ ಕಾಲದ ವಿಶಿಷ್ಟ "ದೇ" ಮುದ್ರೆ ಮತ್ತು ಚಕ್ರರು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(1). ಪು.ಸಂ.* 53–60

ಅನೇಕ ವಿಷಯಗಳಿವೆ. ಅಂತಹ ಒಂದು ವಿಶಿಷ್ಟ ಅಂಶದ ಸಾಕ್ಷಿಯೇ ಈ ಮರದಿಂದ ಮಾಡಿದ "ದೇ" ಎಂಬ ಮೊಹರು. ಈ ಮೊಹರನ್ನು ರಕ್ಷಿಸಿರುವ ಕುಟುಂಬದವರು ತಮ್ಮನ್ನು ಚಕ್ರರು ಎಂದು ಗುರುತಿಸಿಕೊಳ್ಳುತ್ತಾರೆ. ಅವರ ವಂಶಸ್ಥರಲ್ಲಿ ಹಲವರಿಗೆ ಚಕ್ರ ಎಂಬುದು ಪೂರ್ವಪದವಾಗಿ, ವಿಶೇಷಣವಾಗಿ ಇರುವುದನ್ನು ನಾವು ದಾಖಲೆಗಳಲ್ಲಿ ಗಮನಿಸಬಹುದು. ಮೈಸೂರು ರಾಜ್ಯವನ್ನು ಶ್ರೀರಂಗಪಟ್ಟಣದ ರಾಜಧಾನಿಯಿಂದ ಆಳಿದ ಮಹಾರಾಜ ಶ್ರೀ ಚಿಕ್ಕದೇವರಾಜ ಒಡೆಯರ್ (ಸಾ.ಶ. 1673 – 1704) ಅವರ ಕಾಲದ ಕಂದಾಯಕ್ಕೆ ಸಂಬಂಧಪಟ್ಟ ಉಲ್ಲೇಖಿತ ಅಂಶಗಳಿಗೆ ಈ ಮರದ ಮುದ್ರೆಯು ಸಾಕ್ಷಿಯಾಗಿದೆ. ಚಿಕ್ಕ ದೇವರಾಜ ಒಡೆಯರ್ ಅವರು ಮೈಸೂರು ಅರಸರಲ್ಲಿ ಒಬ್ಬ ಪ್ರಖ್ಯಾತ ರಾಜರಾಗಿದ್ದು ಅನೇಕ ಸುಧಾರಣೆಗಳನ್ನು ಮಾಡಿದವರು. ಅದರಲ್ಲಿಯೂ ಹಣಕಾಸಿನ ವಿಷಯದಲ್ಲಿ ಇವರು ಮಾಡಿದ ಹೊಸ ಆಲೋಚನೆಗಳಿಂದ ಇವರಿಗೆ ನವಕೋಟಿ ನಾರಾಯಣ ಎಂಬ ಬಿರುದು ಬಂದಿತ್ತು. ಇವರ ಕಾಲದಲ್ಲಿ ಸರ್ಕಾರದ ಇಲಾಖೆಗಳು, ಕಂದಾಯ ಪದ್ಧತಿ, ಆಡಳಿತ ಪದ್ಧತಿಗಳು ಹೊಸ ಬದಲಾವಣೆಗಳನ್ನು ಕಂಡವು. ಈ ಮೊಹರಿನ ಅಧ್ಯಯನವು ನಮಗೆ ಚಿಕ್ಕದೇವರಾಜ ಒಡೆಯರ್ ಅವರ ಕಾಲದ ಇನ್ನಷ್ಟು ಸಂಶೋಧನಗೆ ತೊಡಗಿಸಿಕೊಳ್ಳಲು ನೆರವು ನೀಡಬಲ್ಲದು.

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲೂಕಿನ ಸರಗೂರು ಹೋಬಳಿಯ ಮೊಳೆಯೂರು ದಾಖಲೆ ಕಾಳಿಹುಂಡಿ ಗ್ರಾಮ – 571125 ದಲ್ಲಿರುವ ಶ್ರೀ ಸತೀಶ್ ಕೆ.ಎನ್. ಎಂಬ ವ್ಯಕ್ತಿಯ ಬಳಿಯಲ್ಲಿ ವಿಶಿಷ್ಟವಾದ ಮರದ "ದೇ" ಗುರುತಿರುವ ಚಕ್ರಮುದ್ರೆಯಿದ್ದು, ಈ ಕುಟುಂಬದವರನ್ನು ಇಂದಿಗೂ ಚಕ್ರರು ಎಂದು ಕರೆಯಲಾಗುತ್ತದೆ. ಈ ವಂಶದ ಹಲವರಲ್ಲಿ ಚಕ್ರ ಎಂಬ ಪದವನ್ನು ಹೆಸರಿನ ಮುಂದೆ ಹೊಂದಿರುವುದನ್ನು ಸಹ ಅವರ ವಂಶವೃಕ್ಷದ ದಾಖಲೆಗಳಲ್ಲಿ ನಾವು ಕಾಣಬಹುದಾಗಿರುತ್ತದೆ.

ಚಕ್ರ ಸತೀಶ ಇವರಿಗೆ ಚಕ್ರಿಕೆಯ ಉದ್ಯೋಗ ಬಂದಿರುವುದು ನಾಲ್ಕನೇ ತಲೆಮಾರಿನಿಂದ ಎಂದು ಅವರ ಮನೆಯವರು ಪ್ರತಿಪಾದಿಸುತ್ತಾರೆ. ಅಂದರೆ ಚಕ್ರ ಸತೀಶ್ ಕೆ.ಎನ್., ಅವರ ತಂದೆ ಶ್ರೀ ದೊಡ್ಡನಾರಾಯಣ (ಸು. 1941 –2021) ಅವರ ಹೆಂಡತಿ ಶ್ರೀಮತಿ ಅಕ್ಕಾಜಮ್ಮ. ದೊಡ್ಡನಾರಾಯಣ ಅವರು ತಮ್ಮ ಸುಮಾರು 80ನೇ ವರ್ಷದಲ್ಲಿ 25.02.2021 ರಲ್ಲಿ ಮರಣಹೊಂದಿದ್ದಾರೆ. ದೊಡ್ಡ ನಾರಾಯಣ ಅವರ ತಂದೆಯವರ ಹೆಸರು ಶ್ರೀ ಕೆಂಚಯ್ಯ ಉರುಫ್ ಮರಯ್ಯ (ಸು. 1927 – 1991). ಇವರ ಹೆಂಡತಿ ಶ್ರೀಮತಿ ಕೆಂಪಮ್ಮ. ಶ್ರೀ ಕೆಂಚಯ್ಯ ಉರುಫ್ ಮರಯ್ಯ ಸುಮಾರು 75 ವರ್ಷ ಬದುಕಿದ್ದರು. ಶ್ರೀ ಕೆಂಚಯ್ಯ ಉರುಫ್ ಮರಯ್ಯ ಅವರ ತಂದೆಯ ಹೆಸರು ಶ್ರೀ ಚಕ್ರ ಕೆಂಚ. ಶ್ರೀ ಚಕ್ರಕೆಂಚಯ್ಯ ಅವರ ಹೆಂಡತಿ ಶ್ರೀಮತಿ ಚಿಕ್ಕಪುಟ್ಟಮ್ಮ. ಇವರೇ ಚಕ್ರಿಕೆಯನ್ನು ಮೂಲತಃ ಮಾಡುತ್ತಿದ್ದು ಈ ಚಿಕ್ಕದೇವರಾಜ ಒಡೆಯರ್ ಕಾಲದ ಮರದ ಚಕ್ರಮುದ್ರೆಯನ್ನು ಹೊಂದಿದ್ದವರು. ಇಂದಿಗೂ ಇವರ ವಂಶವೃಕ್ಷದ ದಾಖಲೆಗಳಲ್ಲಿ ಇವರನ್ನು ಚಕ್ರಕೆಂಚಯ್ಯ ಎಂದೇ ಉಲ್ಲೇಖಿಸಲಾಗಿದೆ. ಈ ಚಕ್ರಕೆಂಚಯ್ಯ ಅವರು ಚಕ್ರ ಸತೀಶ್ ಕೆ.ಎನ್., ಅವರ ಮುತ್ತಾತನಾಗಿದ್ದಾರೆ. ಈ ಚಕ್ರ ಕೆಂಚಯ್ಯ ಅವರಿಂದ ಪರಂಪರೆಯಾಗಿ ಮರದ ಈ ಚಕ್ರ ಮುದ್ರೆಯು ಚಕ್ರ ಸತೀಶ್ ಕೆ.ಎನ್. ಅವರಿಗೆ ಬಂದಿದೆ. ಇವರು ಇಂದಿಗೂ ಚಕ್ರತನದ ಕೆಲಸ ಮುಂದುವರೆದಿದ್ದು ಶ್ರೀ ಚಕ್ರ ಸತೀಶ್ ಕೆ.ಎನ್. ಅವರು ಶ್ರೀಮತಿ ಸಂಧ್ಯಾ ಜಿ

ಅವರನ್ನು ಮದುವೆಯಾಗಿದ್ದಾರೆ. ಕುಟಂಬದಲ್ಲಿ ಈಗ ತಾಯಿ, ಮಗ ಮತ್ತು ಸೊಸೆ ಕೂಲಿನಾಲಿ ಮಾಡುತ್ತಾ ಚಕ್ರ ಕೆಲಸವನ್ನೂ ಸಹ ಮಾಡುತ್ತಿದ್ದಾರೆ. ಇವರಿಗೆ ಇದೇ ಪರಂಪರೆಯ ಅಣ್ಣತಮ್ಮಂದಿರೂ ಸಹ ಇದ್ದಾರೆ.

**ಚಕ್ರರ ಕೆಲಸಗಳು**

ಗ್ರಾಮದಲ್ಲಿ ಈ ಮುದ್ರೆಯನ್ನು ಹೊಂದಿದ್ದವರನ್ನು ಚಕ್ರರು ಎಂದು ಕರೆಯಲಾಗುತ್ತದೆ. ಅದನ್ನು ವಂಶವೃಕ್ಷದಲ್ಲಿಯೂ ಸಹ ಚಕ್ರ ಎಂಬ ಪೂರ್ವಪದದೊಂದಿಗೆ ಇವರ ಹೆಸರನ್ನು ಉಲ್ಲೇಖಿಸಲಾಗಿದೆ. ಇಂದೂ ಸಹ ಚಕ್ರರು ಪಾರಂಪರಿಕವಾಗಿ ಕೆಲವು ಚಕ್ರತನದ ಕೆಲಸ ಮಾಡುತ್ತಿದ್ದಾರೆ. ಆದರೆ ಇವರು ಚಿಕ್ಕದೇವರಾಜ ಒಡೆಯರ್ ಅವರ ಕಾಲದಲ್ಲಿದ್ದ ಕಂದಾಯದ ಕೆಲಸ ಮಾಡುತ್ತಿಲ್ಲ. ಬದಲಿಗೆ ಗ್ರಾಮದೇವತೆಯಾದ ಊರ ಮಾರಮ್ಮ ಅಥವಾ ಮಾರಿ ಹಬ್ಬದ ಮೊದಲು ಚಕ್ರವಂಶಸ್ಥರು ಮನೆಗೆ ಸುಣ್ಣಬಣ್ಣ ಮಾಡಿಸಿ, ಅದಾದ ನಂತರ ಕಪಿಲಾ ನದಿಗೆ ಹೋಗಿ ಸ್ನಾನ, ಮಡಿ ಮಾಡಿಕೊಂಡು, ಕಪಿಲಾ ನೀರನ್ನು ತಂದು ಮನೆಗೆ ಪ್ರೋಕ್ಷಿಸಿ, ತಮ್ಮ ಮನೆತನದ ಪರಂಪರೆಯಿಂದ ಬಂದಿರುವ ಹೆಬ್ಬಾರವನ್ನು[1] ಪೂಜೆ ಮಾಡಿ ಅದನ್ನು ಹೂವು, ಹೊಂಬಾಳೆ, ಅರಿಸಿನ, ಕುಂಕುಮ ಅಲಂಕರಿಸಿಕೊಂಡು ಊರ ಒಳಗೆ ವಾದ್ಯ ಬಾರಿಸುತ್ತಾ ಬರುತ್ತಾರೆ. ಈ ಧ್ವನಿಯು ಊರಿನಲ್ಲಿ ಬಂದರೆ ಅಲ್ಲಿಗೆ ಗ್ರಾಮಕ್ಕೆ ಮಾರಮ್ಮನ ಪ್ರವೇಶವಾಗಿದೆ ಎಂದು ಭಾವಿಸಲಾಗುತ್ತದೆ. ನಂತರ ಪ್ರತಿಯೊಬ್ಬರ ಮನೆಯ ಮುಂದೆಯೂ ಈ ಹೆಬ್ಬಾರಕ್ಕೆ ಹೂವು ಅರ್ಪಿಸಿ, ಗಂಧದ ಕಡ್ಡಿ ಬೆಳಗಿ ಪೂಜಿಸುತ್ತಾರೆ. ಆದರೆ ಹೆಬ್ಬಾರವನ್ನು ಮನೆಯ ಒಳಗೆ ಕರೆಯುವುದಿಲ್ಲ[2]. ನಂತರ ಗ್ರಾಮದ ಮಧ್ಯದಲ್ಲಿ ಹೊಸಹಟ್ಟಿ ಗೌರಮ್ಮನವರ ಮನೆಯಲ್ಲಿ ಹೆಬ್ಬಾರಕ್ಕೆ ಪೂಜೆ ಸಲ್ಲಿಸುತ್ತಾರೆ. ಈ ಹೆಬ್ಬಾರವನ್ನು ಮಾರಿ ಗುಡಿಯ ಒಳಭಾಗದಲ್ಲಿ ತೆಗೆದು ಕೊಂಡು ಹೋಗಿ ಒಳಗೆ ಇಡುತ್ತಾರೆ. ಹೆಬ್ಬಾರವನ್ನು ನುಡಿಸುವ ಚಕ್ರರು ಬಾಯಿಗೆ ಪೂರ್ಣವಾಗಿ ಒಂದು ಬಟ್ಟೆಯನ್ನು ಸುತ್ತಿಕೊಂಡಿರುತ್ತಾರೆ. ನಂತರ ಮಾರಿ ಹಬ್ಬ ಆರಂಭವಾಗಿ ಐದು ದಿನಗಳು ಹಬ್ಬ ನಡೆಯುತ್ತದೆ. ಮಾರಿ ಹಬ್ಬದ ನಂತರ ಈ ಹೆಬ್ಬಾರವನ್ನು ಚಕ್ರರ ಮನೆಯಲ್ಲಿಯೇ ಇಡಲಾಗುತ್ತದೆ. ಈ ಹಬ್ಬದ ಸಂದರ್ಭದಲ್ಲಿ ಹೆಬ್ಬಾರ ಮರಳಿ ಮನೆಗೆ ತರುವವರೆಗೆ ಚಕ್ರರ ಮನೆಯಲ್ಲಿ ಮಾಂಸದ ಅಡಿಗೆಯನ್ನು ಮಾಡುವುದಿಲ್ಲ. ಇವರ ತಂದೆಯವರಾದ ದೊಡ್ಡನಾರಾಯಣರು ಹೆಬ್ಬಾರದ ಕೆಲಸನಿರ್ವಹಿಸುತ್ತಿದ್ದು, ಅವರ ಮಗ ಶ್ರೀ ಸತೀಶ್ ಕೆ.ಎನ್. ಅವರು ಹೆಬ್ಬಾರದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದನ್ನು ಬಿಟ್ಟು ಚಕ್ರರು ಬೇರೆ ಯಾವುದೇ ಚಕ್ರಿಕೆಯ ಕೆಲಸವನ್ನು ಮಾಡುತ್ತಿಲ್ಲ. ಈಗ ಊರಿನ ಸಾರಿಕೆಯ ಕೆಲಸವನ್ನೂ ಮಾಡುತ್ತಿಲ್ಲ. ಆದರೆ ಈ ಹಿಂದೆ ಸಾರಿಕೆಯನ್ನೂ ಸಹ ಈ ಚಕ್ರರೇ ಮಾಡುತ್ತಿದ್ದರು.

---

[1] ಹೆಬ್ಬಾರ ಎಂಬುದು ಒಂದು ದೊಡ್ಡದಾದ ಡೊಳ್ಳಿನಂತಿರುವ ಚರ್ಮವಾದ್ಯ. ಇದನ್ನು ಮಾರಮ್ಮನ ವಾದ್ಯ ಎಂದು ನಂಬುತ್ತಾರೆ. ಮೊದಲು ಇದನ್ನು ಜಿಂಕೆಯ ಚರ್ಮದಿಂದ ಮಾಡುತ್ತಿದ್ದರು ಆದರೆ ಬದಲಾದ ಕಾಲದಲ್ಲಿ ಮೇಕೆಯ ಚರ್ಮದಿಂದ ಮಾಡುತ್ತಾರೆ ಎಂದು ಚಕ್ರ ಸತೀಶ್ ಅವರು ಹೇಳಿದ್ದಾರೆ.

[2] ಬೀದಿಲಿ ಹೋಗೋ ಮಾರಿ ಮನೆಗೆ ಬಂದಂತೆ ಎನ್ನುವ ಗಾದೆಯ ಮಾತಿನಂತೆ ಮಾರಿಗೆ ಹೊರಗೆ ಪೂಜೆ ಸಲ್ಲುತ್ತದೆಯೇ ವಿನಹ ಮನೆಯ ಒಳಗೆ ಕರೆಯುವುದಿಲ್ಲ.


ಆದರೆ ಈ ಚಕ್ರವಂಶಸ್ಥರ ಕೆಲಸಕ್ಕೂ ಈ "ದೇ" ಎಂಬ ಗುರುತಿನ ಮರದ ಮೊಹರಿಗೂ ಏನು ಸಂಬಂಧ ಎಂಬ ಪ್ರಶ್ನೆಗಳು ಉದ್ಭವವಾಗುತ್ತದೆ. ಈ "ದೇ" ಮುದ್ರೆಯ ಬಗ್ಗೆ ಹೆಚ್ಚಿನ ಮಾಹಿತಿಯು ನಮಗೆ 1887 ರಲ್ಲಿ ಪ್ರಕಟವಾದ ಮಹೀಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ ಮತ್ತು 1916 ರಲ್ಲಿ ಪ್ರಕಟವಾಗಿರುವ ಶ್ರೀಮನ್ಮಹಾರಾಜವಂಶಾವಳಿಗಳಲ್ಲಿ ಈ ಮುದ್ರೆಗಳ ವಿವರವಾದ ವಿಷಯವನ್ನು ಕಾಣುತ್ತೇವೆ. ಈ ವಿವರಗಳಿಗೆ ಹೋಗುವ ಮೊದಲು ಚಕ್ರ ಸತೀಶ್ ಅವರ ಬಳಿ ಇರುವ ಮುದ್ರೆಯ ಸ್ವರೂಪದ ಬಗ್ಗೆ ತಿಳಿಯೋಣ.

**ಚಕ್ರ ಮುದ್ರೆಯ ಅಥವಾ ದೇವರಾಜ ಮುದ್ರೆಯ ವಿವರಗಳು**

ಚಕ್ರ ಎಂಬ ಮುದ್ರೆಯು ಮರದಲ್ಲಿ ಮಾಡಿದ ಮುದ್ರೆಯಾಗಿದೆ. ಇದು ಬಹಳ ಹಗುರವಾಗಿದ್ದು ಕೈಯಲ್ಲಿ ಹಿಡಿಯಬಹುದಾಗಿದೆ. ಇದರ ಉದ್ದ ಆರೂವರೆ (6 1/2) ಇಂಚು (17 ಸೆಂಟಿಮೀಟರ್) ಉದ್ದವಿದೆ. ಮೇಲಿನ ಚಕ್ರಾಕಾರವು ಎರಡೂವರೆ ಇಂಚು (2 1/2) 6.5 ಸೆಂಟಿಮೀಟರ್ ಅಗಲವಿದೆ. ಕೆಳಭಾಗದ ಹಿಡಿಕೆ ಕೇವಲ 1.5 ಸೆಂಟಿಮೀಟರ್ ಅಷ್ಟಿದೆ. ಮೇಲ್ಭಾಗದ ತಲೆಯು ವೃತ್ತಾಕಾರವಿದ್ದು ಅದರ ಒಳಭಾಗದಲ್ಲಿಯೂ ಸಹ ವೃತ್ತವನ್ನು ಕೊರೆಯಲಾಗಿದೆ. ಈ ಮೇಲ್ಭಾಗದ ತಲೆಯ ಎರಡೂ ಭಾಗದಲ್ಲಿ ವೃತ್ತವಿದ್ದು ಅದರಲ್ಲಿ ಒಂದು ಮುಖದಲ್ಲಿ "ದೇ" ಎಂದು ಕೊರೆಯಲಾಗಿದ್ದು ಅದರ ಎರಡೂ ಪಕ್ಕಗಳಲ್ಲಿ ಸೂರ್ಯ ಮತ್ತು ಚಂದ್ರರನ್ನು ಕೊರೆಯಲಾಗಿದೆ. ಈ "ದೇ" ಮುದ್ರೆಯ ಹಿಂಭಾಗದಲ್ಲಿ ಒಂದು ನಾಲ್ಕು ಗೆರೆಗಳ ಗುರುತು ಇದೆ. ಒಂದು ರೀತಿಯ ಹಿಡಿಕೆಯ ಕನ್ನಡಿಯಂತಿರುವ ಈ ಮರದ ಮುದ್ರೆಯ ಕೆಳಭಾಗವನ್ನು ಅತ್ಯಂತ ಸುಂದರವಾಗಿ ಅಣಿಗೊಳಿಸಿದ್ದು ಹಿಡಿಕೆಯ ಕೆಳಭಾಗದಲ್ಲಿ ಅದನ್ನು ದಾರದಿಂದ ಕಟ್ಟಲು ಅನುವಾಗುವಂತೆ ಒಂದು ಸಣ್ಣರಂಧ್ರವನ್ನೂ ಸಹ ಮಾಡಲಾಗಿದೆ.








(ಚಿತ್ರಗಳು[3] : ದೇವರಾಜ ಮುದ್ರೆಯ ಚಿತ್ರಗಳು ಮತ್ತು ಅಳತೆಗಳು)

ಈ ಮುದ್ರೆಯ ಉದ್ದೇಶ ಏನು? ಯಾವ ಕಾರಣಕ್ಕೆ ಬಳಸುತ್ತಿದ್ದರು? ಇದನ್ನು ಯಾರು ಬಳಸುತ್ತಿದ್ದರು ? ಇದನ್ನು ಜಾರಿಗೆ ತಂದವರು ಯಾರು ಎಂಬ ಪ್ರಶ್ನೆಗಳಿಗೆ ನಮಗೆ ಸ್ಪಷ್ಟ ಉತ್ತರವು ಮಹೀಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ [4] ಗ್ರಂಥದ 114 ಮತ್ತು 115 ನೇ ಪುಟಗಳಲ್ಲಿ ಮತ್ತು ಮೈಸೂರು ಸಂಸ್ಥಾನದ ಪ್ರಭುಗಳು ಶ್ರೀಮನ್ಮಹಾರಾಜರವರ ವಂಶಾವಳಿ[5] ಗ್ರಂಥದ ಭಾಗ – 1 ರ 4ನೇ ಚಿಕ್ಕದೇವರಾಜ ಒಡೆಯರವರು ಅಧ್ಯಾಯದ ಪುಟ 120 ಮತ್ತು 121 ರಲ್ಲಿ ವಿವರವಾಗಿ ಹೇಳಲಾಗಿದೆ.

ವಂಶರತ್ನಾಕರದ ಪ್ರಕಾರ ಶ್ರೀ ಚಿಕ್ಕದೇವರಾಜ ಒಡೆಯರ್ ಅವರು ತಮ್ಮ ರಾಜ್ಯದ ಗಡಿ ಪ್ರದೇಶದಲ್ಲಿ 84 ಗಡಿಗಳವರೂ ಸಹ ಪ್ರತ್ಯೇಕವಾದ ಮುದ್ರೆಯನ್ನು ಪಾಳೆಗಾರರು ಹೊಂದಿದ್ದು ಇದು ಗೊಂದಲಕ್ಕೆ ಕಾರಣವಾಗುತ್ತದೆ ಎಂದು ಭಾವಿಸಿದ ಅರಸರು ಗಡಿಯ ಹೆಸರಿನಿಂದ ಕೂಡಿರುವ ಮಧ್ಯದಲ್ಲಿ **"ದೇ"** ಎಂಬ ಅಕ್ಷರ ಮತ್ತು ಅದರ ಅಕ್ಕ ಪಕ್ಕ ಸೂರ್ಯ – ಚಂದ್ರರಿರುವ ಮುದ್ರೆಯನ್ನು ಮಾಡಿಸಿ ಚಿನ್ನದ ಬಿಲ್ಲೆಯ ಉಂಗುರವನ್ನು ಆಯಾ ಗಡಿಯ ಸುಬೇದಾರನ ಕೈಯಲ್ಲಿ ಇರುವಂತೆ ಮಾಡಿಸಿದರು. ಅದೇ ರೀತಿ ಅಠವಣೆ ಚಿಕ್ಕಪಾರುಪತ್ಯಗಾರ, ಕಿಲ್ಲೇದಾರರಿಗೂ, ಗಡಿಗಳಿಗೆ ಸೇರಿರುವ ಹೋಬಳಿಗಳಿಗೂ, ಗ್ರಾಮಗಳಿಗೂ, ಸುಂಕ,

[3] ಚಿತ್ರಗಳನ್ನು ನ್ಯಾಡ್ ವಿಭಾಗದ ಶ್ರೀ ಮಲ್ಲೇಶ್ ಎಂ ಮತ್ತು ಶ್ರೀಮತಿ ನಿಶ್ಚಿತಾ ಡಿ. ಎಂ. ಇವರು ಸಹಕರಿಸಿರುತ್ತಾರೆ.)

[4]ಮಹೀಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ, ಮೈಸೂರು, 1883, ಪುಟ 114 ಮತ್ತು 115

[5]ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ –1, ಮೈಸೂರು – 1916, ಪುಟ – 120 ಮತ್ತು 121

ಪೊಮ್ಮು, ಸಮಯಾಚಾರ ಮುಂತಾದ ಸಮಸ್ತ ಪಣಕಟ್ಟಿನ ಗೊತ್ತುಗಾರ ಜನಗಳಿಗೂ "ದೇ" ಎಂಬ ಒಂದೇ ಅಕ್ಷರ ಕೆತ್ತಿಸಿರುವ ಬೆಳ್ಳಿಯ ಉಂಗುರಗಳನ್ನು ಮಾಡಿಸಿಕೊಟ್ಟರು. ಅರಮನೆಯ ಅಪ್ಪಣೆಯನ್ನು ಮೀರಿ ನಡೆದ ಜನರ ಮನೆಗಳಿಗೂ ದವಸದ ರಾಶಿಗಳಿಗೂ ಮುದ್ರೆಯನ್ನು ಹಾಕತಕ್ಕಬಗ್ಗೆ ಮರದ ಹಲಿಗೆಯನ್ನು ಮಾಡಿಸಿ ಆಚೆ ಈಚೆ ಸೂರ್ಯಚಂದ್ರರನ್ನೂ ಮಧ್ಯೇ "ದೇ" ಎಂಬ ಅಕ್ಷರವನ್ನೂ ಕೆತ್ತಿಸಿದ ಈ ಮುದ್ರೆಕೋಲನ್ನು ಗ್ರಾಮಗಳ ಚಾವಡಿಯಲ್ಲಿ ಇರಿಸಿ ಇದ್ದು, ತೋಟಿ, ತಳವಾರ, ನೀರಗಂಟಿ ಈ ಜನಗಳು ಗ್ರಾಮದ ಪಾರುಪತ್ಯಗಾರ ಹೇಳಿದಂತೆ ಆ ಮುದ್ರೆಕೋಲನ್ನು ತೆಗೆದುಕೊಂಡು ಹೋಗಿ ಮುದ್ರೆಹಾಕುವಂತೆ ನಿಬಂಧನೆ ಮಾಡಿದರು. ಇದೇ ಮೇಲಿನ ಉಲ್ಲೇಖವನ್ನೇ ಶ್ರೀಮನ್ಮಹಾರಾಜರ ವಂಶಾವಳಿ ಗ್ರಂಥದಲ್ಲಿ ಅನುವರ್ತಿಸಲಾಗಿದೆ.

ಅಂದರೆ ಮೊಳೆಯೂರು ಎಂಬ ಕಾಳಿಹುಂಡಿ ಗ್ರಾಮದ ಚಕ್ರ ಸತೀಶ ಅವರ ಮನೆಯಲ್ಲಿ ಪರಂಪರೆಯಿಂದ ಬಂದಿರುವ ಮರದ "ದೇ" ಮೊಹರು ಮೇಲೆ ಉಲ್ಲೇಖಿಸಿರುವ ಮುದ್ರೆಯ ಮರದ ಕೋಲಿನ ವಿವರಗಳಿಗೆ ಯಥಾವತ್ತಾಗಿ ಹೊಂದಾಣಿಕೆಯಾಗುತ್ತದೆ. ಅದೂ ಅಲ್ಲದೇ ಮುದ್ರೆಯ ಮೇಲಿನ "ದೇ" ಅಕ್ಷರದ ವಿನ್ಯಾಸವೂ ಸಹ ಚಿಕ್ಕದೇವರಾಜ ಒಡೆಯರ್ ಆಡಳಿತಾವಧಿಗೆ ಸೇರಿದ ಲಿಪಿಯ ವಿನ್ಯಾಸಕ್ಕೆ ಹೊಂದಿಕೊಳ್ಳುತ್ತದೆ. ಆದ್ದರಿಂದ ಅದು 17–18ನೇ ಶತಮಾನದಲ್ಲಿದ್ದ ಮುದ್ರೆಯ ಕೋಲು ಎಂದು ತೀರ್ಮಾನಿಸಬಹುದು.

ಆದರೆ ಶ್ರೀ ಸತೀಶ್ ಕೆ.ಎನ್. ಅವರ ಮನೆತನ ಚಕ್ರತನ ಮಾಡುತ್ತಿದ್ದರೆ ವಿನಹ ತೋಟಿ, ತಳವಾರ ಮತ್ತು ನೀರಗಂಟಿ ಮಾಡುತ್ತಿದ್ದುದ್ದಕ್ಕೆ ನಮಗೆ ದಾಖಲೆಗಳು ಸಿಗುವುದಿಲ್ಲ. ತಳವಾರಿಕೆ ಎಂಬುದು ಗ್ರಾಮರಕ್ಷಣೆಯಾದರೆ, ನೀರಗಂಟಿ ಎಂಬುದು ಕೆರೆಗಳ ಮತ್ತು ತೂಬುಗಳ ಅಥವಾ ಇನ್ನಾವುದೇ ಜಲಮೂಲಗಳ ನಿರ್ವಹಣೆ ಮಾಡುವ ವೃತ್ತಿಯಾಗಿದ್ದು, ಇವರಿಗೆ ಪೂರಕವಾಗಿದ್ದವರೇ ತೋಟಿಗಳು. ಇವೆಲ್ಲವೂ ವೃತ್ತಿಗಳೇ ಹೊರತು ಜಾತಿ ಸೂಚಕ ಪದಗಳಲ್ಲ. ಆದರೂ ನಿರ್ದಿಷ್ಟ ಸಮುದಾಯಗಳು ಈ ಕೆಲಸಮಾಡುತ್ತಿದ್ದುದು ನಮಗೆ ಶಾಸನಗಳಿಂದ ಕಂಡು ಬರುತ್ತದೆ.

ಚಕ್ರ ಸತೀಶ್ ಅವರ ವಂಶಸ್ಥರು ಈ ತೋಟಿ, ತಳವಾರಿಕೆ, ನೀರಗಂಟಿ ಕೆಲಸಗಳನ್ನು ಹಿಂದೆ ಮಾಡುತ್ತಿದ್ದಿರಬಹುದು. ಏಕೆಂದರೆ ವಂಶರತ್ನಾಕರದ ಪ್ರಕಾರ ಐದು ವೃತ್ತಿಗಳಿಗೆ ಅಂದರೆ

1. ಪಂಚಾಗದ ಬ್ರಾಹ್ಮಣ
2. ಶಾನುಭೋಗ
3. ತೋಟಿ
4. ತಳವಾರ
5. ನೀರುಗಂಟಿ

ಇವರಿಗೆ ಶ್ರೀ ಚಿಕ್ಕದೇವರಾಜ ಒಡೆಯರ್ ಅವರು ಜೀವನಾರ್ಥವಾಗಿ (ಸಂಬಳದಂತೆ) ಅವರವರ ತಾರತಮ್ಯವಿದ್ದಂತೆ 1 ವರಹ ದಿಂದ 6 ವರಹದವರೆಗೆ ಮಾನ್ಯವಾಗಿ ಭೂಮಿಯನ್ನು ಕೊಟ್ಟರು [6]. ಈ ದಾಖಲೆಯ ಪ್ರಕಾರ ಮೇಲಿನ ವೃತ್ತಿಯವರಿಗೆ ಜಮೀನು ನೀಡಲಾಗಿತ್ತು. ಇವರು ಆ ಭೂಮಿಯನ್ನು ಅನುಭವಿಸುತ್ತಿದ್ದರು. ಆದರೆ 1954 ರಲ್ಲಿ ಕರ್ನಾಟಕ ರಾಜ್ಯದಲ್ಲಿ ಇನಾಂ ರದ್ದಿಯಾತಿ ಕಾನೂನು ಜಾರಿಗೊಂಡಿತು. ಆಗ ಈ ಚಕ್ರವಂಶದವರು 3.12.1956 ರಲ್ಲಿ ಇನಾಂ ರದ್ದಿಯಾತಿ ಕಾನೂನಿನಂತೆ ತಮ್ಮನ್ನೇ ಹಕ್ಕುದಾರರನ್ನಾಗಿ ಮಾಡಬೇಕೆಂದು ಅಂದಿನ ಜಿಲ್ಲಾಧಿಕಾರಿಗಳಿಗೆ ಮನವಿ ಕೊಟ್ಟಿದ್ದರ ಮೇಲೆ ಅಂದಿನ ಮೈಸೂರು ಡಿವಿಜನ್‌ನ ಇನಾಂ ರದ್ದಿಯಾತಿ ಸ್ಪೆಷಲ್ ಜಿಲ್ಲಾಧಿಕಾರಿಗಳು 1.8.1961 ರಲ್ಲಿ 1954 ರ ಕಾಯ್ದೆಯ 10ನೇ ಸೆಕ್ಷನ್ ಪ್ರಕಾರ ಚಕ್ರವಂಶಸ್ಥರಿಗೆ ಹಿಡುವಳಿದಾರರನ್ನಾಗಿ ಮಾಡಿದರು. ನಂತರ ಇದರ ಬಗ್ಗೆ ಮತ್ತೆ ವಿವಾದ ಉಂಟಾದ ಹಿನ್ನೆಲೆಯಲ್ಲಿ ಹುಣಸೂರು ವಿಭಾಗದ ಸಹಾಯಕ ಕಮೀಷನರ್ ಅವರ ಕೋರ್ಟ್‌ನಲ್ಲಿ ವಿಚಾರಣೆ ನಡೆಸಿ ಮೇಲಿನ ಚಕ್ರನ ವಂಶದವರ ಬಗ್ಗೆ ವಿಚಾರಿಸಲು ಆ ತಾಲೂಕಿನ ತಹಶೀಲ್ದಾರ್ ಅವರನ್ನು ಕಳುಹಿಸಿ ಅವರ ಮೂಲಕ ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಇದರಲ್ಲಿ ಹಿಂದಿನ ಮಹಾರಾಜರ ಕಾಲದ ತಖ್ತೆ, ಬರಾವರ್ದ್ ದಾಖಲೆಗಳಲ್ಲಿ ಈ ಕುಟುಂಬಸ್ಥರ ವಂಶಸ್ಥರೇ ಭೂ ಹಿಡುವಳಿ ಮಾಡುತ್ತಿದ್ದ ದಾಖಲೆಗಳು ಇದ್ದುದರಿಂದ ಸರ್ವೇ ನಂಬರ್ 90, 95, 96, 162 ಮತ್ತು 168 ರಲ್ಲಿರುವ ಸುಮಾರು 18 ಎಕರೆ ಜಮೀನನ್ನು ಅವರ ಕುಟುಂಬಸ್ಥರ ಹೆಸರಿಗೆ ಮಾಡಿ 20.12.1975 ರಲ್ಲಿ ನ್ಯಾಯಾಲಯದಲ್ಲಿ ಆದೇಶಿಸಲಾಗಿದೆ.

ಈ ಎಲ್ಲ ದಾಖಲೆಗಳನ್ನು ಪರಿಶೀಲಿಸಿದಾಗ ಈ ಹಿಂದೆ ಈ "ದೇ" ಮುದ್ರೆಯನ್ನು ಹೊಂದಿರುವ ಚಕ್ರಸತೀಶ್ ಅವರ ಮನೆಯವರು ಹಿಂದೆ ತೋಟಿ, ತಳವಾರಿಕೆ, ನೀರುಗಂಟಿ ಕೆಲಸಗಳನ್ನು ಮಾಡುತ್ತಿದ್ದರು ಎಂದು ತಿಳಿದು ಬರುತ್ತದೆ. ಆದರೆ ಆಧುನಿಕ ಸೌಲಭ್ಯಗಳು ಮತ್ತು ಸರ್ಕಾರಗಳು ಬಂದ ನಂತರ ಈ ಕೆಲಸ ಇವರ ವಂಶಸ್ಥರಿಗೆ ಇಲ್ಲವಾಗಿದೆ.

ಮುಂದುವರೆದು ಶ್ರೀ ಸತೀಶ್ ಕೆ.ಎನ್. ಅವರ ಮನೆಯಲ್ಲಿಯೇ ಈ ದೇವರಾಜ ಮುದ್ರೆ "ದೇ" ಇದ್ದರೂ ಸಹ ಅವರಿಗೆ ಅರ್ಧಗುಂಟೆ ಜಾಗವನ್ನು ಉಳಿದು ಯಾವುದೇ ಭೂಮಿಯು ಇಲ್ಲದಂತಾಗಿದೆ. ಇತರರಿಗೆ ಜಮೀನು ಹಕ್ಕುದಾರಿಕೆ ದೊರೆತಿದ್ದು, ನಿಜವಾದ ಮುದ್ರೆಯ ಕೋಲು ಹೊಂದಿರುವ ಕುಟುಂಬಕ್ಕೆ ಏನೂ ಸಿಕ್ಕದೇ ಇರುವುದು ಇಂದು ಇತಿಹಾಸದ ಚೋದ್ಯವಾಗಿ ದಾಖಲೆಯಾಗಿದೆ.

ಒಟ್ಟಿನಲ್ಲಿ ಈ ವಿಶಿಷ್ಟ "ದೇ" ಎಂಬ ಅಕ್ಷರದ ದೇವರಾಜ ಮುದ್ರೆಯು ಮೈಸೂರು ಇತಿಹಾಸದ ಒಂದು ಪುಟದ ಸಾಕ್ಷಿಯಾಗಿದೆ ಎಂದರೆ ತಪ್ಪಾಗಲಾರದು. ಹಳೆಯ ಮುದ್ರೆಗಳ ಬಗ್ಗೆ ಮತ್ತಷ್ಟು ವಿವರವಾದ ಅಧ್ಯಯನದ ಅವಕಾಶಗಳನ್ನು ಇದು ನಮಗೆ ನೀಡುತ್ತದೆ ಎನ್ನುವುದು ಸತ್ಯವಾಗಿದೆ[7].

---

[6] ಮಹೀಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ, ಮೈಸೂರು, 1883, ಪುಟ 114

[7] ಈ ಲೇಖನ ಸಿದ್ಧಪಡಿಸುವಲ್ಲಿ ನೆರವಾದ ಶ್ರೀಮತಿ ವನಿತಾ ಆರ್, ಮಾಹಿತಿ ನೀಡಿದ ಶ್ರೀಸತೀಶ್ ಕೆ.ಎನ್. ಮತ್ತು ಚಿತ್ರವನ್ನು ಬಿಡಿಸಿದ ಶ್ರೀಮತಿ ನಿಶ್ಚಿತಾ ಮತ್ತು ಶ್ರೀ ಮಲ್ಲೇಶ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಪರಾಮರ್ಶನ ಗ್ರಂಥಗಳು**


- ಮಹೀಶೂರ ಶ್ರೀಮನ್ಮಹಾರಾಜ ಚಾಮರಾಜ ಒಡೆಯರವರ ವಂಶರತ್ನಾಕರ, ಅರಮನೆಯ ಜಗನ್ಮೋಹನ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿದೆ. ಮೈಸೂರು – 1887
- ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ – 1, ಮೈಸೂರು – 1916
- ಶ್ರೀ ಸತೀಶ್ ಕೆ.ಎನ್. ಅವರು ಪರಿಶೀಲನೆಗಾಗಿ ಹಾಜರು ಪಡಿಸಿದ ಕುಟುಂಬದ ದಾಖಲೆಗಳು
- Mysore Gazetteer – Editor : C. Hayavadana Rao, The Government press, Mysore – 193